2017 ಕ.ತೀ.ವ. 1809

(ಕಲಬುರ್ಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಜಿ. ರಮೇಶ್

# ಶ್ರೀಮತಿ ಲಕ್ಷ್ಮೀಬಾಯಿ –ವಿರುದ್ಧ– ರಾಜ್ಯ ಚುನಾವಣಾ ಆಯುಕ್ತರು, ಬೆಂಗಳೂರು ಮತ್ತು ಇತರರು*

ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ 5(7) ಹಾಗೂ 8ನೇ ಪ್ರಕರಣಗಳು.

ಖೆರ್ದ (ಬಿ) ಗ್ರಾಮ ಪಂಚಾಯಿತಿಯ ಸದಸ್ಯರು ಈ ರಿಟ್ ಅರ್ಜಿಯಲ್ಲಿ ಈ ಮೇಲೆ ಹೇಳಲಾದ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಚುನಾವಣೆ ನಡೆಸುವುದಕ್ಕೆ ಪ್ರತ್ಯರ್ಜಿದಾರ ಸಂ.1 ಮತ್ತು 2 ಇವರಿಗೆ ನಿರ್ದೇಶಿಸುವಂತೆ ಕೋರಿರುತ್ತಾರೆ.

ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು, ಖೆರ್ದ (ಬಿ) ಗ್ರಾಮ ಪಂಚಾಯಿತಿಯ ಒಟ್ಟು ಸದಸ್ಯರ ಸಂಖ್ಯೆ 20 ಮತ್ತು 13 ಸದಸ್ಯರು ಗ್ರಾಮ ಪಂಚಾಯಿತಿಗೆ ಚುನಾಯಿತರಾಗಿರವರೆಂದು ನಿವೇದಿಸಿರುವರು. ಗ್ರಾಮ ಪಂಚಾಯಿತಿಯ ಒಟ್ಟು ಸದಸ್ಯರಲ್ಲಿ 13 ಸದಸ್ಯರು ಮೂರನೇ ಎರಡರಷ್ಟು ಆಗಿರುತ್ತಾರೆ. ಆದುದರಿಂದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಚುನಾವಣೆ ನಡೆಸುವುದಕ್ಕೆ ಕಾನೂನಿನ ಅಡಚಣೆಯೂ ಇರುವುದಿಲ್ಲ ಎಂದು ತನ್ನ ವಾದಾಂಶದಲ್ಲಿ ಮಂಡಿಸಿರುವರು.

* ರಿಟ್ ಅರ್ಜಿ ಸಂ. 204483/2015 (ಎಲ್‌ಬಿ–ಇಎಲ್‌ಇ) ದಿನಾಂಕ: 20ನೇ ಆಗಸ್ಟ್, 2015.

ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು, ಗ್ರಾಮ ಪಂಚಾಯಿತಿಯ ಒಟ್ಟು ಸದಸ್ಯರಲ್ಲಿ 13 ಸದಸ್ಯರುಗಳು ಮೂರನೇ ಎರಡರಷ್ಟು ಪ್ರಮಾಣವಾಗಿರುವುದಿಲ್ಲ ಮತ್ತು ಅಲ್ಲದೆ, ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆಸುವುದಕ್ಕೆ ಗ್ರಾಮ ಪಂಚಾಯಿತಿ ಯುಕ್ತವಾಗಿ ರಚಿತಗೊಂಡಿರಬೇಕೆಂದು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 (ಅಧಿನಿಯಮ)ದ 5(7)ನೇ ಪ್ರಕರಣದಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿದೆ. ಆದುದರಿಂದ ಸದರಿ ಗ್ರಾಮ ಪಂಚಾಯಿತಿಯೂ ಯುಕ್ತವಾಗಿ ರಚನೆಗೊಂಡಿಲ್ಲವೆಂದು ನಿವೇದಿಸಿರುವರು.

ನಮ್ಮ ಅಭಿಪ್ರಾಯದಲ್ಲಿ, 20ರಲ್ಲಿ ಮೂರನೇ ಎರಡರಷ್ಟು ಪ್ರಮಾಣ 13.33 ಆಗಿರುತ್ತದೆ. ಇದಕ್ಕೆ ಪೂರ್ಣಗೊಳಿಸುವ ನಿಯಮವನ್ನು ಅನ್ವಯಿಸಿದಾಗ 13 ಸಂಖ್ಯೆ ಪೂರ್ಣಗೊಂಡ ಸಂಖ್ಯೆಯಾಗುತ್ತದೆ. ಆದುದರಿಂದ, ಸದರಿ ಗ್ರಾಮ ಪಂಚಾಯಿತಿಯ ಒಟ್ಟು ಸದಸ್ಯರಲ್ಲಿ 13 ಸದಸ್ಯರು ಮೂರನೇ ಎರಡರಷ್ಟು ಪ್ರಮಾಣದಲ್ಲಿ ರಚನೆಗೊಂಡಿಲ್ಲವೆಂಬ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರ ವಾದವನ್ನು ತಿರಸ್ಕರಿಸಲಾಗಿದೆ. ಗ್ರಾಮ ಪಂಚಾಯಿತಿಯ ಒಟ್ಟು ಸದಸ್ಯರು ಮೂರನೇ ಎರಡರಷ್ಟು ಪ್ರಮಾಣದಲ್ಲಿ ಇರುವುದರಿಂದ, ಮೇಲೆ ಹೇಳಿದ ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆಸುವುದಕ್ಕೆ ರಾಜ್ಯ ಚುನಾವಣಾ ಆಯುಕ್ತರಿಗೆ ಮತ್ತು ಅಥವಾ ಜಿಲ್ಲಾಧಿಕಾರಿ ಬೀದರ್ ಇವರಿಗೆ ಕಾನೂನು ಅಡಚಣೆ ಇರುವುದಿಲ್ಲ ಎಂದು ಅಭಿಪ್ರಾಯಪಟ್ಟು ಸದರಿ ರಿಟ್ ಅರ್ಜಿಯನ್ನು ಪುರಸ್ಕರಿಸಿದೆ.

ಅರ್ಜಿದಾರರ ಪರವಾಗಿ : ಶ್ರೀ ಆರ್.ಎಸ್. ಕಾಡಗಂಚಿ – ವಕೀಲರು ;
2 ಮತ್ತು 3ನೇ ಪ್ರತ್ಯರ್ಜಿದಾರರ ಪರವಾಗಿ : ಶ್ರೀ ಎ. ಸಯ್ಯೆದ್ ಹಬೀಬ್ – ಹೆಚ್ಚುವರಿ ಸರ್ಕಾರಿ ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎಚ್.ಜಿ. ರಮೇಶ್ (ಮೌಖಿಕ):**

1. ಖೆರ್ದ (ಬಿ) ಗ್ರಾಮ ಪಂಚಾಯಿತಿಯ ಸದಸ್ಯರು ಈ ರಿಟ್ ಅರ್ಜಿಯಲ್ಲಿ ಈ ಮೇಲೆ ಹೇಳಲಾದ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಚುನಾವಣೆ ನಡೆಸುವುದಕ್ಕೆ ಪ್ರತ್ಯರ್ಜಿದಾರ ಸಂ.1 ಮತ್ತು 2 ಇವರಿಗೆ ನಿರ್ದೇಶಿಸುವಂತೆ ಕೋರಿರುತ್ತಾರೆ.

2. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು, ಖೆರ್ದ (ಬಿ) ಗ್ರಾಮ ಪಂಚಾಯಿತಿಯ ಒಟ್ಟು ಸದಸ್ಯರ ಸಂಖ್ಯೆ 20 ಮತ್ತು 13 ಸದಸ್ಯರು ಗ್ರಾಮ ಪಂಚಾಯಿತಿಗೆ ಚುನಾಯಿತರಾಗಿರವರೆಂದು ನಿವೇದಿಸಿರುವರು. ಗ್ರಾಮ ಪಂಚಾಯಿತಿಯ ಒಟ್ಟು ಸದಸ್ಯರಲ್ಲಿ 13 ಸದಸ್ಯರು ಮೂರನೇ ಎರಡರಷ್ಟು ಆಗಿರುತ್ತಾರೆ. ಆದುದರಿಂದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಚುನಾವಣೆ ನಡೆಸುವುದಕ್ಕೆ ಕಾನೂನಿನ ಅಡಚಣೆಯೂ ಇರುವುದಿಲ್ಲ ಎಂದು ತನ್ನ ವಾದಾಂಶದಲ್ಲಿ ಮಂಡಿಸಿರುವರು.

3. ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು, ಗ್ರಾಮ ಪಂಚಾಯಿತಿಯ ಒಟ್ಟು ಸದಸ್ಯರಲ್ಲಿ 13 ಸದಸ್ಯರುಗಳು ಮೂರನೇ ಎರಡರಷ್ಟು ಪ್ರಮಾಣವಾಗಿರುವುದಿಲ್ಲ ಮತ್ತು, ಅಲ್ಲದೆ, ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆಸುವುದಕ್ಕೆ ಗ್ರಾಮ ಪಂಚಾಯಿತಿ ಯುಕ್ತವಾಗಿ ರಚಿತಗೊಂಡಿರಬೇಕೆಂದು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 (ಅಧಿನಿಯಮ)ದ 5(7)ನೇ ಪ್ರಕರಣದಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿದೆ. ಆದುದರಿಂದ ಸದರಿ ಗ್ರಾಮ ಪಂಚಾಯಿತಿಯೂ ಯುಕ್ತವಾಗಿ ರಚನೆಗೊಂಡಿಲ್ಲವೆಂದು ನಿವೇದಿಸಿರುವರು. ಅವರು ಮುಂದುವರೆದು ಸದರಿ ಗ್ರಾಮ ಪಂಚಾಯಿತಿಯ ಒಟ್ಟು ಸದಸ್ಯರ ಮೂರನೇ ಎರಡರಷ್ಟುಕ್ಕಿಂತಲೂ ಕಡಿಮೆ ಸದಸ್ಯರು ಚುನಾಯಿತಗೊಂಡಿರುವುದರಿಂದ ಅಧಿನಿಯಮದ 8ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಿದಂತೆ ಆಡಳಿತ ಸಮಿತಿ ಅಥವಾ ಆಡಳಿತಗಾರನನ್ನು ನಿಯೋಜಿಸಬೇಕಾಗುತ್ತದೆ

ಎಂದು ವಾದದಲ್ಲಿ ಮಂಡಿಸಿರುವರು. ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ಉಲ್ಲೇಖಿಸಿದ ಸುಸಂಗತ ಉದ್ಧೃತ ಭಾಗಗಳಾದ ಅಧಿನಿಯಮದ 5(7) ಪ್ರಕರಣ ಮತ್ತು 8ನೇ ಪ್ರಕರಣ ಈ ಮುಂದಿನಂತಿದೆ.

> ***"ಪ್ರಕರಣ 5(7):*** *(1) ರಿಂದ (6)ನೇ ಉಪ–ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸರ್ಕಾರದ ಯಾವುದೇ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟಿದ್ದರೂ, ಯಾವುದೇ ಗ್ರಾಮ ಪಂಚಾಯಿತಿಯ ಒಟ್ಟು ಸದಸ್ಯರಲ್ಲಿ 3/2ನೇ ರಷ್ಟು ಸದಸ್ಯರು ಚುನಾಯಿತಗೊಂಡಿದ್ದರೆ, ಈ ಅಧಿನಿಯಮದ ಮೇರೆಗೆ ಯುಕ್ತವಾಗಿ ರಚಿಸಬಹುದಾದ ಗ್ರಾಮ ಪಂಚಾಯಿತಿ ಎಂದು ಭಾವಿಸತಕ್ಕದ್ದು.*

> ***"8. ಗ್ರಾಮ ಪಂಚಾಯತಿಗಳ ಸದಸ್ಯರನ್ನು ಚುನಾಯಿಸಲು ತಪ್ಪಿದಲ್ಲಿ ಆಡಳಿತ ಸಮಿತಿಯ ಅಥವಾ ಆಡಳಿತಾಧಿಕಾರಿಯ ನೇಮಕ.–***

> *(1) (ಎ) ಡೆಪ್ಯುಟಿ ಕಮೀಷನರ್ ಅವರಿಗೆ ಗ್ರಾಮ ಪಂಚಾಯತಿಯನ್ನು ಸ್ಥಾಪಿಸಿದ ತರುವಾಯ ಕೂಡಲೇ ಗ್ರಾಮಕ್ಕಾಗಿ ಅಥವಾ ಗ್ರಾಮಗಳ ಗುಂಪಿಗಾಗಿ ಪಂಚಾಯತಿಯನ್ನು,–*

> *(i) ಗ್ರಾಮ ಪಂಚಾಯತಿಯ ಸದಸ್ಯರ ಚುನಾವಣೆಯನ್ನು ನಡೆಸುವುದಕ್ಕೆ ಯಾವುದೇ ತೊಂದರೆಯ ಕಾರಣದಿಂದಾಗಿ; ಅಥವಾ*

> *(ii) 5ನೇ ಪ್ರಕರಣದ (6)ನೇ ಉಪಪ್ರಕರಣದ ಅಡಿಯಲ್ಲಿ ನಡೆಸಲಾದ ಎರಡು ಅನುಕ್ರಮಗಳು ಚುನಾವಣೆಗಳಲ್ಲಿ*

ಅಂಥ ಸದಸ್ಯರನ್ನು ಚುನಾಯಿಸಲು ವಿಫಲರಾಗಿರುವ ಕಾರಣದಿಂದಾಗಿ; ಅಥವಾ

*(iii)* ಇತರ ಯಾವುದೇ ಸಾಕಷ್ಟು ಕಾರಣದಿಂದಾಗಿ, ಅದೇನೆ ಇರಲಿ, ರಚಿಸಲು ಸಾಧ್ಯವಿಲ್ಲವೆಂದು ಮನದಟ್ಟಾದರೆ; ಅಥವಾ

(ಬಿ) ಗ್ರಾಮ ಪಂಚಾಯಿತಿಗೆ ಯಾವುದೇ ಸಾರ್ವತ್ರಿಕ ಚುನಾವಣೆಯಲ್ಲಿ ಯಾರೇ ಸದಸ್ಯನು; ಚುನಾಯಿತನಾಗದಿದ್ದರೆ, ಅಥವಾ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟಕ್ಕಿಂತಲೂ ಕಡಿಮೆ ಸದಸ್ಯರು ಚುನಾಯಿತರಾಗಿದ್ದರೆ,

ಡೆಪ್ಯೂಟಿ ಕಮೀಷನರ್ ಅವರು ಅಧಿಸೂಚನೆಯ ಮೂಲಕ,-

*(i)* ಚುನಾಯಿತರಾಗಲು ಅರ್ಹರಾದ ವ್ಯಕ್ತಿಗಳನ್ನು ಒಳಗೊಂಡ ಆಡಳಿತ ಸಮಿತಿಯನ್ನು ನೇಮಕ ಮಾಡತಕ್ಕದ್ದು. ಅಂಥ ವ್ಯಕ್ತಿಗಳ ಸಂಖ್ಯೆಯು 5ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ನಿರ್ಧರಿಸಲಾದಂಥ ಸದಸ್ಯರ ಸಂಖ್ಯೆಗೆ ಚುನಾಯಿತರಾಗತಕ್ಕದ್ದು, ಅಥವಾ

*(ii)* ಆಡಳಿತಾಧಿಕಾರಿಯನ್ನು ನೇಮಕ ಮಾಡತಕ್ಕದ್ದು.

(2) ಆಡಳಿತ ಸಮಿತಿಯು, ಸದಸ್ಯರು ಅಥವಾ ಆಡಳಿತಾಧಿಕಾರಿಯು, (1)ನೇ ಉಪ-ಪ್ರಕರಣದ ಮೇರೆಗೆ, ಅಧಿಸೂಚನೆಯಲ್ಲಿ, ಡೆಪ್ಯೂಟಿ ಕಮೀಷನರ್ ಅವರು

*ನಿರ್ದಿಷ್ಟಪಡಿಸಬಹುದಾದಂತೆ ಆರು ತಿಂಗಳಿಗೂ ಮೀರದಂತ ಅವಧಿಯವರೆಗೆ ಹುದ್ದೆಯನ್ನು ಧಾರಣ ಮಾಡತಕ್ಕದ್ದು.*

*(3) (1)ನೇ ಉಪ–ಪ್ರಕರಣದ ಅಡಿಯಲ್ಲಿ ಆಡಳಿತ ಸಮಿತಿಯು ಅಥವಾ ಆಡಳಿತಾಧಿಕಾರಿಯು ನೇಮಕಗೊಂಡಾಗ, ಅಂಥ ನೇಮಕಕ್ಕೆ ಮುಂಚೆ, ಗ್ರಾಮ ಪಮಚಾಯಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದ ವ್ಯಕ್ತಿಗಳು ಯಾರಾದರೂ ಇದ್ದರೆ, ಅಂಥ ವ್ಯಕ್ತಿಗಳು ಗ್ರಾಮ ಪಂಚಾಯಿತಿಯ ಸದಸ್ಯರಾಗಿರುವುದು ನಿಂತುಹೋಗತಕ್ಕದ್ದು. ಆ ಗ್ರಾಮ ಪಂಚಾಯಿತಿಯ ಎಲ್ಲ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಅಂಥ ಆಡಳಿತ ಸಮಿತಿಯು ಅಥವಾ ಆಡಳಿತಾಧಿಕಾರಿಯು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು.*

*(4) ಆಡಳಿತ ಸಮಿತಿಯನ್ನು ಅಥವಾ ಆಡಳಿತಾಧಿಕಾರಿಯನ್ನು ಈ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಉದ್ದೇಶಕ್ಕಾಗಿ ಕ್ರಮಬದ್ಧವಾಗಿ ರಚಿಸಿದ ಗ್ರಾಮ ಪಂಚಾಯಿತಿ ಎಂದು ಭಾವಿಸತಕ್ಕದ್ದು;*

*ಪರಂತು, (1)ನೇ ಉಪ–ಪ್ರಕರಣದ ಅಡಿಯಲ್ಲಿ ಆಡಳಿತ ಸಮಿತಿಯು ಅಥವಾ ಆಡಳಿತಾಧಿಕಾರಿಯು, ನೇಮಕಗೊಂಡ ತರುವಾಯ, ಯಾವುದೇ ವಿಷಯದಲ್ಲಿ ಡೆಪ್ಯೂಟಿ ಕಮೀಷನರ್ ಅವರಿಗೆ ಸದಸ್ಯರ ಚುನಾವಣೆ ಮೂಲಕ ಗ್ರಾಮ ಪಂಚಾಯಿತಿಯನ್ನು ಕ್ರಮಬದ್ಧವಾಗಿ ರಚಿಸಲು ಯಾವುದೇ ತೊಂದರೆಯಿಲ್ಲವೆಂದು ಮನದಟ್ಟಾದರೆ, ಡೆಪ್ಯೂಟಿ ಕಮೀಷನರ್ ಅವರು ಯಾವ ಪದಾವಧಿಗಾಗಿ ಆಡಳಿತ ಸಮಿತಿಯ ಸದಸ್ಯರನ್ನು*

*ಅಥವಾ ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗಿತ್ತೋ ಆ ಪದಾವಧಿಯು ಮುಕ್ತಾಯವಾಗಿಲ್ಲದಿದ್ದರೂ, ಅಧಿಸೂಚನೆಯ ಮೂಲಕ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಸಂದರ್ಭಾನುಸಾರ, ಆಡಳಿತ ಸಮಿತಿಯ ಸದಸ್ಯರು ಅಥವಾ ಆಡಳಿತಾಧಿಕಾರಿಯು ಪದಧಾರಣ ಮಾಡುವುದು ನಿಂತುಹೋಗತಕ್ಕದ್ದು ಎಂದು ನಿರ್ದೇಶಿಸಬಹುದು."*

*(ಒತ್ತು ನೀಡಲಾಗಿದೆ)*

4. ನಮ್ಮ ಅಭಿಪ್ರಾಯದಲ್ಲಿ, 20ರಲ್ಲಿ ಮೂರನೇ ಎರಡರಷ್ಟು ಪ್ರಮಾಣ 13.33 ಆಗಿರುತ್ತದೆ. ಇದಕ್ಕೆ ಪೂರ್ಣಗೊಳಿಸುವ ನಿಯಮವನ್ನು ಅನ್ವಯಿಸಿದಾಗ 13 ಸಂಖ್ಯೆ ಪೂರ್ಣಗೊಂಡ ಸಂಖ್ಯೆಯಾಗುತ್ತದೆ. ಆದುದರಿಂದ, ಸದರಿ ಗ್ರಾಮ ಪಂಚಾಯಿತಿಯ ಒಟ್ಟು ಸದಸ್ಯರಲ್ಲಿ 13 ಸದಸ್ಯರು ಮೂರನೇ ಎರಡರಷ್ಟು ಪ್ರಮಾಣದಲ್ಲಿ ರಚನೆಗೊಂಡಿಲ್ಲವೆಂಬ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರ ವಾದವನ್ನು ತಿರಸ್ಕರಿಸಲಾಗಿದೆ. ಗ್ರಾಮ ಪಂಚಾಯಿತಿಯ ಒಟ್ಟು ಸದಸ್ಯರು ಮೂರನೇ ಎರಡರಷ್ಟು ಪ್ರಮಾಣದಲ್ಲಿ ಇರುವುದರಿಂದ, ಮೇಲೆ ಹೇಳಿದ ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆಸುವುದಕ್ಕೆ ರಾಜ್ಯ ಚುನಾವಣಾ ಆಯುಕ್ತರಿಗೆ ಮತ್ತು ಅಥವಾ ಜಿಲ್ಲಾಧಿಕಾರಿ ಬೀದರ್ ಇವರಿಗೆ ಕಾನೂನು ಅಡಚಣೆ ಇರುವುದಿಲ್ಲ.

5. ಮೇಲೆ ಹೇಳಿದ ಅಭಿಪ್ರಾಯದಂತೆ, ಪ್ರತ್ಯರ್ಜಿದಾರ ಸಂಖ್ಯೆ 1 ಮತ್ತು 2 ಇವರಿಗೆ ಖೆರ್ದ (ಬಿ) ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆಸುವುದಕ್ಕೆ ಕ್ರಮಗಳನ್ನು ಕೈಗೊಳ್ಳಲು ನಿರ್ದೇಶಿಸುತ್ತದೆ ಮತ್ತು ತ್ವರಿತವಾಗಿ ಇಡೀ ಚುನಾವಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು ಮತ್ತು ಯಾವುದೇ ಸಂದರ್ಭದಲ್ಲಿ ಈ ಆದೇಶದ ಪ್ರತಿ ಸ್ವೀಕೃತಿಯಾದ ದಿನಾಂಕದಿಂದ

***ಎರಡು ತಿಂಗಳೊಳಗಾಗಿ*** ಚುನಾವಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು. ಅರ್ಜಿದಾರರು ಈ ಆದೇಶದ ಪ್ರತಿಯನ್ನು ಪ್ರತ್ಯರ್ಜಿದಾರ ಸಂಖ್ಯೆ 1 ಮತ್ತು 2 ಇವರಿಗೆ ಮೇಲೆ ನಿಗದಿಪಡಿಸಿದ ಸಮಯದೊಳಗೆ ತ್ವರಿತವಾಗಿ ಮತ್ತು ಯಾವುದೇ ಸಂದರ್ಭದಲ್ಲಿ ಚುನಾವಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದಕ್ಕೆ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುವುದಕ್ಕೆ ಒದಗಿಸತಕ್ಕದ್ದು.

ಈ ರಿಟ್ ಅರ್ಜಿಯನ್ನು ಮೇಲೆ ನಿರೂಪಿಸಿದಂತೆ ವಿಲೇ ಮಾಡಲಾಗಿದೆ.